# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 957
2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಪಿ.ಆರ್. ರಮೇಶ್
3. ಉತ್ತರಿಸಬೇಕಾದ ದಿನಾಂಕ : 28.09.2020
4. ಉತ್ತರಿಸಬೇಕಾದ ಸಚಿವರು : ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

| ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಇತ್ತೀಚಿಗೆ ರಾಜ್ಯದಾದ್ಯಂತ ಮತ್ತು ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ ಹೆಚ್ಚಾಗಿ ಅಪಾಯಕಾರಿ ರಾಸಾಯನಿಕ ಲೋಹದ ಅಂಶಗಳು ಪ್ರಾಣಿ, ಪಕ್ಷಿಗಳು ಹಾಗೂ ಮಾನವನ ಕೂದಲಿನಲ್ಲಿ ಪತ್ತೆಯಾಗಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಹಸಿರುಮನೆ ಅನಿಲಗಳು (Green house Gases) ಜೊತೆಗೆ ಅಪಾಯಕಾರಿ ರಸಾಯನಿಕ ಲೋಹದ ಅಂಶಗಳು (ಉದಾ: ಸತು, ಪಾದರಸ) ವಾಯು ಮಾಲಿನ್ಯದಲ್ಲಿ ಹೆಚ್ಚಿರುವ ಬಗ್ಗೆ ಯಾವುದಾದರೂ ಸಂಸ್ಥೆ ಸರ್ಕಾರದ ಪರವಾಗಿ ಸಂಶೋಧನ ನಡೆಸಿದೆಯೇ; ಸರ್ಕಾರ ಈ ಕುರಿತು ಕ್ರಮ ಕೈಗೊಳ್ಳಲು ಚಿಂತಿಸಿದೆಯೇ; (ವಿವರ ನೀಡುವುದು) | ಬಂದಿರುವುದಿಲ್ಲ. |
| (ಆ) | ಇತ್ತೀಚಗೆ ದೆಹಲಿ ಮಹಾನಗರದಲ್ಲಿ ವಾಯು ಮಾಲಿನ್ಯ ಹೆಚ್ಚಾಗಿ ಅಲ್ಲಿನ ಜನರು ಕಷ್ಟಪಡುವ ರೀತಿಯಲ್ಲಿ ಮುಂದೊಂದು ದಿನ ಬೆಂಗಳೂರಿಗೆ ಬರುವ ಸಾಧ್ಯತೆಗಳನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು: (ವಿವರ ನೀಡುವುದು) | ಬೆಂಗಳೂರು ನಗರದ ವಾಯು ಗುಣಮಟ್ಟವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಒಟ್ಟು 20 ಕೇಂದ್ರಗಳಲ್ಲಿ ಮಾಪನ ಮಾಡಲಾಗುತ್ತಿದೆ. 20 ಕೇಂದ್ರಗಳ ಪೈಕಿ 7 ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳಲ್ಲಿ (CAAQMS) ಸತತ ಇಪ್ಪತ್ನಾಲ್ಕು ಗಂಟೆಗಳ ಕಾಲ ಗಂಧಕದ ಡೈಆಕ್ಸೈಡ್ ($SO_2$) ಸಾರಜನಕದ ಡೈಆಕ್ಸೈಡ್ ($NO_2$), ಧೂಳಿನ ಕಣಗಳು, ($PM_{10}$) ಧೂಳಿನ ಕಣಗಳು, ($PM_{2.5}$) ಇಂಗಾಲದ ಮಾನಾಕ್ಸೈಡ್ (CO), ಓಜೋನ್ (O3), ಅಮೋನಿಯಾ (NH3) ಮತ್ತು ಬೆನ್‌ಜೀನ್ (Benzene) ಸೇರಿದಂತೆ ಎಂಟು ಮಲಿನಕಾರಕಗಳನ್ನು ಮಾಪನ ಮಾಡಲಾಗುತ್ತಿದೆ ಹಾಗೂ 13 ಮಾನವ ಚಾಲಿತ ಕೇಂದ್ರಗಳಲ್ಲಿ (Manual Stations) 24 ಗಂಟೆಗಳ ಕಾಲ, ವಾರಕ್ಕೆ 2 ಬಾರಿ, ಗಂಧಕದ ಡೈ ಆಕ್ಸೈಡ್ ($NO_2$), ಸಾರಜನಕದ ಡೈ ಆಕ್ಸೈಡ್ ($SO_2$), ಧೂಳಿನ ಕಣಗಳ ಗಾತ್ರ 10 ಮೈಕ್ರಾನ್ ಹಾಗೂ 2.5 ಮೈಕ್ರಾನ್ ($PM_{10}$), ($PM_{2.5}$), ಅಮೋನಿಯ ಮತ್ತು ಸೀಸ ಮಲಿನಕಾರಕಗಳನ್ನು |

ವಿಶ್ಲೇಷಿಸಲಾಗುತ್ತಿದೆ.

2017-18, 2018-19 ಹಾಗೂ 2019-20ನೇ ಸಾಲಿನಲ್ಲಿ, ಬೆಂಗಳೂರು ನಗರದ 20 ಕೇಂದ್ರಗಳಲ್ಲಿ ವಾಯು ಗುಣಮಟ್ಟ ಮಾಪನ ಮಾಡಿದ ವರದಿಯ ಪ್ರಕಾರ ವಾರ್ಷಿಕ ವಾಯುಗುಣಮಟ್ಟ ಸೂಚ್ಯಂಕ (Air Quality Index) ಅನ್ನು ಅವಗಾಹಿಸಿದಲ್ಲಿ ಬೆಂಗಳೂರು ನಗರ 20 ಕೇಂದ್ರಗಲ್ಲಿ ವಾಯುಗುಣಮಟ್ಟ ಸೂಚ್ಯಂಕ ಸಾಧಾರಣ (Moderate) ಹಾಗೂ ತೃಪ್ತಿಕರವಾಗಿರುವುದು (Satisfactory) ಕಂಡುಬಂದಿದೆ.

| ವರ್ಷ | ಉತ್ತಮ | ತೃಪ್ತಿಕರ | ಸಾಧಾರಣ |
|---|---|---|---|
| 2017-18 (ಒಟ್ಟು 16 ಮಾಪನ ಕೇಂದ್ರಗಳಲ್ಲಿ) | 2 | 9 | 5 |
| 2018-19 (ಒಟ್ಟು 20 ಮಾಪನ ಕೇಂದ್ರಗಳಲ್ಲಿ) | – | 14 | 6 |
| 2019-20 (ಒಟ್ಟು 20 ಮಾಪನ ಕೇಂದ್ರಗಳಲ್ಲಿ) | – | 18 | 2 |

**ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಈ ಕೆಳಗಿನ ಮೂರು ಸಮಿತಿಗಳು ಬೆಂಗಳೂರು ನಗರದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ.**

1. **ಕಾರ್ಯಪಡೆ**:- ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ W.P.No.13029 / 1985 (Civil-PIL) ನಿರ್ದೇಶನದಂತೆ, ಸರ್ಕಾರದ ಆದೇಶ ಸಂಖ್ಯೆ: ಅಪಜೀ/183/ಇಎನ್‌ವಿ/ 2001 ದಿನಾಂಕ:10.09.2001 ರಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ (Task Force) ಯನ್ನು ರಚಿಸಿದ್ದು, ಸದರಿ ಸಮಿತಿಯು ರೂಪಿಸಿದ 14 ಅಂಶಗಳ ಕಾರ್ಯಕ್ರಮಗಳಲ್ಲಿ 12 ಅಂಶಗಳನ್ನು ಜಾರಿಗೊಳಿಸಲಾಗಿದೆ.

2. **ಸಮನ್ವಯ ಸಮಿತಿ (Co-ordination Committee)**: ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯುಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ WP No. 39423/2013, Suo Moto V/s State of Karnataka ನಿರ್ದೇಶನದಂತೆ, ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಇಲಾಖೆಗಳನ್ನೊಳಗೊಂಡ ಸಮನ್ವಯ ಸಮಿತಿಯನ್ನು ದಿನಾಂಕ:2.4.2014 ರಲ್ಲಿ ರಚಿಸಲಾಗಿದೆ. ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ, ಮಂಡಳಿಯು ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ನಿಯಂತ್ರಿಸಲು ಸಾರಿಗೆ ಇಲಾಖೆ, ಬಿ.ಬಿ.ಎಂ.ಪಿ ಹಾಗೂ ಪೋಲಿಸ್ ಇಲಾಖೆಗಳಿಗೆ ವಾಯು ಕಾಯ್ದೆ, 1981 ರ ಸೆಕ್ಷನ್ 31(ಎ) ಅಡಿಯಲ್ಲಿ ಈ ಕೆಳಕಂಡ ಅಲ್ಪಾವಧಿ ಮತ್ತು ದೀರ್ಘಾವಧಿ ಕ್ರಮಗಳನ್ನು

ಅನುಷ್ಠಾನಗೊಳಿಸುವಂತೆ ದಿನಾಂಕ:25.8.2014 ರಲ್ಲಿ ನಿರ್ದೇಶಿಸಿದೆ.

1) ಭಾರಿ ವಾಹನಗಳು ನಗರದ ಒಳಗಡೆ ಬಾರದಂತೆ ನಿರ್ಬಂಧಿಸುವುದು.

2) ನಗರದ ಒಳಗಡೆ 2 ಸ್ಟ್ರೋಕ್ ದ್ವಿಚಕ್ರ ವಾಹನಗಳ ಬಳಕೆ ನಿಷೇಧಿಸುವುದು.

3) 15 ವರ್ಷಗಳ ಹಳೆಯ ವಾಹನಗಳ ಬಳಕೆಗೆ ನಿರ್ಬಂಧ ಹೇರಿರುವುದನ್ನು ಅನುಷ್ಠಾನಗೊಳಿಸುವುದು.

4) ಬೆಂಗಳೂರು ಕೇಂದ್ರ ವ್ಯಾಪಾರ ಜಿಲ್ಲೆಯ ಒಳಗಡೆ ಆಟೋರಿಕ್ಷಾ ಸಂಚಾರ ನಿರ್ಬಂಧಿಸುವುದು.

5) ಬಿ.ಬಿ.ಎಂ.ಪಿಯು ರಸ್ತೆ ಮತ್ತು ರಸ್ತೆ ಬದಿಯಲ್ಲಿ ಇರುವ ಧೂಳು, ಸಿಲ್ಟ್‌ನ್ನು ಯಾಂತ್ರಿಕವಾಗಿ ಪ್ರತಿದಿನ ಕಡ್ಡಾಯವಾಗಿ ಸ್ವಚ್ಛಗೊಳಿಸುವುದು.

6) ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಿ ರಸ್ತೆಗಳನ್ನು ವ್ಯವಸ್ಥಿತವಾಗಿ ಇಡುವುದು.

7) ಪಾದಚಾರಿ ರಸ್ತೆಗಳ ಅತಿಕ್ರಮಣವನ್ನು ತೆರವುಗೊಳಿಸುವುದು.

8) ಬಹುಮಹಡಿ ವಾಹನಗಳ ನಿಲುಗಡೆ ವ್ಯವಸ್ಥೆ ಕಲ್ಪಿಸುವುದು.

9) ವಾಹನಗಳ ದಟ್ಟಣೆ ಹೆಚ್ಚಿಸುವಂತಹ ಸಭೆ ಸಮಾರಂಭಗಳನ್ನು ಪೊಲೀಸ್ ಇಲಾಖೆ ಪರಿಶೀಲಿಸಿ ಅನುಮತಿ ನೀಡುವುದು.

10) ವಾಹನ ದಟ್ಟಣೆಯನ್ನು ನಿಯಂತ್ರಿಸಲು ಸಮಗ್ರ ಅಧ್ಯಯನ ಮಾಡಿ ಕಾರ್ಯಯೋಜನೆ ರೂಪಿಸುವುದು.

11) ಮೀಸಲಾದ ಬಸ್ ಲೇನ್‌ಗಳ ವ್ಯವಸ್ಥೆ ಕಲ್ಪಿಸುವುದು.

12) ವಸತಿ ವಲಯ, ವಾಣಿಜ್ಯ ವಲಯ ಮತ್ತು ಸೂಕ್ಷ್ಮ ವಲಯಗಳ ಗಡಿ ನಿರ್ಮಿಸುವುದು ಹಾಗೂ ವಸತಿ ವಲಯವನ್ನು ವಾಣಿಜ್ಯ ವಲಯವನ್ನಾಗಿ ಪರಿವರ್ತಿಸಲು ನಿರ್ಬಂಧ ಹೇರುವುದು.

13) ನಗರದ ಒಳಗೆ-ಹೊರಗೆ ಖಾಲಿ ಇರುವ ಜಾಗಗಳಲ್ಲಿ (ರಸ್ತೆ ಬದಿಗಳಲ್ಲಿ, ಸಾರ್ವಜನಿಕ ಉದ್ಯಾನವನಗಳಲ್ಲಿ, ಕೈಗಾರಿಕಾ ವಲಯಗಳಲ್ಲಿ ಹಾಗೂ ಇತ್ಯಾದಿ) ಗಿಡ ಮರಗಳನ್ನು ನೆಟ್ಟು ನಗರದ ಹಸಿರು ಪರದೆ (Green belt) ಪ್ರಮಾಣ ಹೆಚ್ಚಿಸುವುದು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ ಸಾರಿಗೆ ಇಲಾಖೆ, ಬೃಹತ್ ಬೆಂಗಳೂರು ನಗರಪಾಲಿಕೆ ಹಾಗೂ ಪೊಲೀಸ್ ಇಲಾಖೆಗಳು ದೀರ್ಘಾವಧಿ ಹಾಗೂ ಅಲ್ಪಾವಧಿ ಕಾರ್ಯ ಸೂಚಿಗಳನ್ನು ಹಮ್ಮಿಕೊಂಡು ಅವುಗಳ ಅನುಷ್ಠಾನವನ್ನು ಮಾಡಲಾಗುತ್ತಿದೆ.

3. **ವಾಯು ಗುಣಮಟ್ಟ ಮಾಪನ ಸಮಿತಿ (Air Qulity Monitoring Committee):** ದಿನಾಂಕ: 8.10.2018 ರಂದು ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ, ನವದೆಹಲಿ ಇವರು ಹೊರಡಿಸಿರುವ ಆದೇಶದ ಅನ್ವಯ ನಾನ್ ಅಟೇನ್ಮೆಂಟ್ ನಗರಗಳ ವಾಯು ಮಾಲಿನ್ಯವನ್ನು

ನಿಯಂತ್ರಿಸಲು ಸಮಗ್ರ ಕ್ರಿಯಾ ಯೋಜನೆಯನ್ನು ರೂಪಿಸಲು ರಾಜ್ಯದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, (ಜೀವಿಪರಿಸ್ಥಿತಿ ಮತ್ತು ಪರಿಸರ) ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ 6 ಸದಸ್ಯರನ್ನೊಳಗೊಂಡ ಸಮಿತಿಯನ್ನು ನವೆಂಬರ್ 24, 2018 ರಂದು "ವಾಯು ಗುಣಮಟ್ಟ ಮಾಪನ ಸಮಿತಿ" ಯನ್ನು ರಚಿಸಲಾಗಿದೆ. ಸದರಿ ಸಮಿತಿಯು ದಿನಾಂಕ:8.4.2019 ರಂದು 2ನೇ ಸಭೆ ನಡೆಸಿ, 44 ಅಂಶಗಳ ಕರಡು ಕ್ರಿಯಾ ಯೋಜನೆಗಳನ್ನು ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ, ಅನುಮೋದಿಸಿ, ನಿಗದಿತ ಅವಧಿಯೊಳಗೆ ಅನುಷ್ಠಾನಗೊಳಿಸಲು ಸೂಚಿಸಿತು. ಸಮಿತಿ ಅನುಮೋದಿಸಿದ ಬೆಂಗಳೂರು ನಗರದ ಕ್ರಿಯಾ ಯೋಜನೆಯನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಕಳುಹಿಸಲಾಗಿದ್ದು, ಸದರಿ ಕ್ರಿಯಾ ಯೋಜನೆಗಳಿಗೆ ಮಂಡಳಿಯು ಅನುಮೋದನೆ ನೀಡಿರುತ್ತದೆ. ಸದರಿ ಕ್ರಿಯಾ ಯೋಜನೆಗಳಿದ್ದು, ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಸ್ತುತ (Source Apportionment Study)ಯನ್ನು CSTEP, Bengaluru ರವರಿಗೆ ನೀಡಿದ್ದು ಅಧ್ಯಯನ ಪ್ರಗತಿಯಲ್ಲಿದೆ.

ಅಲ್ಲದೆ, ವಾಯು ಮಾಲಿನ್ಯ ತಡೆಗೆ ಈ ಕೆಳಕಂಡ ಕ್ರಮಗಳನ್ನು ಸಹಾ ಕೈಗೊಳ್ಳಲಾಗಿದೆ.

- ಪರಿಸರ (ಸಂರಕ್ಷಣಾ) ಕಾಯ್ದೆ, 1986 ರಲ್ಲಿ ನಿಗದಿಪಡಿಸಿರುವಂತೆ ವಾಯು ಮಾನಕಗಳು ನಿಗದಿ ಪಡಿಸಿದ ಪರಿಮಿತಿಯೊಳಗಿರುವಂತೆ ಕಾರ್ಖಾನೆಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನೀಡುವ ಸಮ್ಮತಿ ಪತ್ರದಲ್ಲಿ ನಿಬಂಧನೆ ಹಾಕಲಾಗುತ್ತಿದೆ ಹಾಗೂ ಆಗಿಂದಾಗ್ಗೆ ವಾಯು ಮಾಲಿನ್ಯ ಮಾಡುವಂತಹ ಕಾರ್ಖಾನೆಗಳನ್ನು ಪರಿವೀಕ್ಷಣೆಗೊಳಪಡಿಸಲಾಗುತ್ತಿದೆ.
- ರಾಸಾಯನಿಕ ಹಾಗೂ ಇನ್ನಿತರ ಅಧಿಕ ಮಾಲಿನ್ಯ ಉಂಟುಮಾಡುವ ಕೈಗಾರಿಕೆಗಳಿಗೆ ನಿರಂತರ ಎಮಿಶನ್ ಮಾಪನ ಉಪಕರಣಗಳನ್ನು ಅಳವಡಿಸಿ ಮಾಪನ ವರದಿಯನ್ನು ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಂತರ್ಜಾಲಗಳಿಗೆ ಸಂಪರ್ಕ ಕಲ್ಪಿಸಲಾಗಿದೆ ಇದರಿಂದ ಕೈಗಾರಿಕೆಗಳು ನಿಗಧಿ ಪಡಿಸಿದ ಮಾನಕಕ್ಕಿಂತ ಹೆಚ್ಚು ಹೊಗೆ ಹೊರಸೂಸದಂತೆ ಕಾಲಕಾಲಕ್ಕೆ ಇವುಗಳ ಕಾರ್ಯಕ್ಷಮತೆಯನ್ನು ಪರೀಕ್ಷಿಸಿ ಮಂಡಳಿಯಿಂದ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.
- ಘನತ್ಯಾಜ್ಯ ಸುಡುವುದರಿಂದಾಗುವ ವಾಯು ಮಾಲಿನ್ಯವನ್ನು ತಡೆಯುವ ದೃಷ್ಟಿಯಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 06 ಇಎನ್‌ಜಿ 2017, ದಿನಾಂಕ:03.08.2017ರಲ್ಲಿ, ರಾಜ್ಯ ಸರ್ಕಾರವು ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1981 ರ ಕಲಂ 19(5)ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯನ್ನು ಸೇರಿದಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಾಗೂ

| | | |
|---|---|---|
| | | ರಾಜ್ಯಾದ್ಯಂತ ಇರುವ ಘನತ್ಯಾಜ್ಯ ಭೂಭರ್ತಿ ಘಟಕಗಳಲ್ಲಿನ ತೆರೆದ ಜಾಗದಲ್ಲಿ ಮರಗಿಡಗಳ ರೆಂಬೆ ಮತ್ತು ಎಲೆಗಳೂ ಸೇರಿದಂತೆ ಯಾವುದೇ ರೀತಿಯ ಘನತ್ಯಾಜ್ಯಗಳನ್ನು ಸುಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.<br>• ಕಟ್ಟಡಗಳ ನಿರ್ಮಾಣ ಮತ್ತು ಕಟ್ಟಡ ಉರುಳಿಸುವ ಸಮಯದಲ್ಲಿ ಉಂಟಾಗುವ ಘನತ್ಯಾಜ್ಯಗಳನ್ನು (Construction & Demolition Waste) ವಾಹನಗಳಲ್ಲಿ ಸಾಗಿಸುವ ಸಮಯದಲ್ಲಿ ಅವುಗಳನ್ನು ಸೂಕ್ತ ರೀತಿಯಲ್ಲಿ ಮುಚ್ಚಿಕೊಂಡು ಸಾಗಿಸುವಂತೆ ಹಾಗೂ ಅವುಗಳಿಗೆ ನೀರಿನ ಸಿಂಪರಣೆ ಮಾಡಿ ಯಾವುದೇ ರೀತಿಯಲ್ಲಿ ವಾಯು ಮಾಲಿನ್ಯ ಆಗದಂತೆ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರಿಗೂ ಸೇರಿದಂತೆ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಿ.ಎಂ.ಆರ್.ಸಿ.ಎಲ್, ಕೆ.ಆರ್.ಡಿ.ಎಲ್, ಸಿ.ಪಿ.ಡಬ್ಲ್ಯೂ.ಡಿ, ಪಿ.ಡಬ್ಲ್ಯೂ.ಡಿ, ಇಲಾಖೆಗಳಿಗೆ ಅಗತ್ಯ ನಿರ್ದೇಶನ ನೀಡಲಾಗಿದೆ.<br>• ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಪರಿಸರ ವಿಮೋಚನಾ ಪತ್ರ (Environmental Clearence)ನೀಡುವ ಸಂದರ್ಭದಲ್ಲಿ ಧೂಳಿನ ಕಣಗಳಿಂದ ಉಂಟಾಗುವ ಮಾಲಿನ್ಯವನ್ನು ತಡೆಗಟ್ಟುವ ದೃಷ್ಟಿಯಿಂದ ಸುತ್ತಲೂ ತಗಡಿನ ತಡೆಗೋಡೆಯನ್ನು ನಿರ್ಮಾಣ ಮಾಡುವುದನ್ನು ಹಾಗೂ ನೀರಿನ ಸಿಂಪಡಣೆ ಮಾಡುವುದನ್ನು ಕಡ್ಡಾಯ ಮಾಡಲಾಗಿದೆ.<br>• ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 168 ಇಪಿಸಿ 2017, ದಿನಾಂಕ;11.08.2017ರಲ್ಲಿ ರಾಜ್ಯ ಸರ್ಕಾರವು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯಿದೆ, 1981ರ ಕಲಂ 19(3)ರ ಅನುಸಾರ ರಾಜ್ಯಾದ್ಯಂತ ವಾಯುಮಾಲಿನ್ಯ ನಿಯಂತ್ರಣಕ್ಕೊಳಪಟ್ಟಿರುವ ಪ್ರದೇಶದಲ್ಲಿನ ಸಿಮೆಂಟ್ ಆವಿಗೆ (kiln) ಮತ್ತು ಸಿಮೆಂಟ್ ಉತ್ಪಾದನಾ ಘಟಕಗಳಿಗೆ ಹೊಂದಿಕೊಂಡಿರುವ ಸುಣ್ಣದಕಲ್ಲನ್ನು ಬಳಸಿ ಗಂಧಕದ ಡೈಆಕ್ಸೈಡ್ ($SO_2$) ಹೊರಸೂಸುವಿಕೆಯನ್ನು ನಿಯಂತ್ರಿಸಬಲ್ಲ ಘಟಕಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕೈಗಾರಿಕೆಗಳಲ್ಲಿ ಪೆಟ್ ಕೋಕ್ ಅನ್ನು ಇಂಧನವಾಗಿ ಬಳಸುವುದನ್ನು ನಿಷೇಧಿಸಲಾಗಿದೆ.<br>• ವಾಹನಗಳ ಹೊಗೆ ತಪಾಸಣಾ ಜವಾಬ್ದಾರಿ ಸಾರಿಗೆ ಇಲಾಖೆಯ ವ್ಯಾಪ್ತಿಯಲ್ಲಿದೆ. ಅದಾಗ್ಯೂ, ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯವು, ಸಾರಿಗೆ ವಲಯದಿಂದ ಶೇ.42 ಉಂಟಾಗುತ್ತಿರುವುದನ್ನು ತಿಳಿದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಡೀಸಲ್ ಮತ್ತು ಪೆಟ್ರೋಲ್ ವಾಹನಗಳು ಹೊರಸೂಸುವ ಹೊಗೆಯನ್ನು ಮಾಪನ ಮಾಡಲು ಸುಸಜ್ಜಿತ ಉಪಕರಣಗಳನ್ನೊಳಗೊಂಡ 12 ಹೊಗೆ ಮಾಪನ ಮಾಡುವ ಸಂಚಾರಿ ವಾಹನಗಳನ್ನು ಖರೀದಿಸಿದ್ದು, ಈ 12 ವಾಹನಗಳ ಪೈಕಿ 6 ವಾಹನಗಳು ಬೆಂಗಳೂರು ನಗರಕ್ಕೆ ಹಂಚಿಕೆ ಮಾಡಲಾಗಿದೆ. ಈ ವಾಹನಗಳು ಸಾರಿಗೆ ಇಲಾಖೆ, ಪೋಲೀಸ್ ಇಲಾಖೆ, ಬಿ.ಎಂ.ಟಿ.ಸಿ ಮತ್ತು ಕೆ.ಎಸ್.ಆರ್.ಟಿ.ಸಿ ಸಂಸ್ಥೆಗಳ |

| | | |
|---|---|---|
| | | ಸಹಾಯದೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಮಿತಿಗಿಂತ ಹೆಚ್ಚು ಹೊಗೆ ಹೊರಸೂಸುವ ವಾಹನಗಳ ಮೇಲೆ ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. |
| (ಇ) | ಕಳೆದ 3 ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ದಾಖಲಾದ ವಾಯ ಗುಣಮಟ್ಟದ ಸೂಚ್ಯಂಕದ (Air Quality Index) ಮಾಹಿತಿಯನ್ನು ವರ್ಷವಾರು ನೀಡುವುದು? | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಳೆದ 3 ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ಮಾಪನ ಮಾಡಲಾಗಿದ್ದು, ವಾಯ ಗುಣಮಟ್ಟದ ಸೂಚ್ಯಂಕದ (Air Quality Index) ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |

ಸಂಖ್ಯೆ: ಅಪಜೀ 193 ಇಪಿಸಿ 2020

**(ಆನಂದ್ ಸಿಂಗ್)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

31

## ಅನುಬಂಧ

## ANNUAL AVERAGE OF AIR QUALITY INDEX OF BENGALURU CITY FOR THE YEAR 2017-2018 TO 2019-2020

| Sl. No. | Name of the Monitoring Station | 2017-18 | | 2018-19 | | 2019-20 | |
|---|---|---|---|---|---|---|---|
| | | Category(Range) | | Category(Range) | | Category(Range) | |
| 1 | Export promotional Park , ITPL, Whitefield Industrial Area | 103 | Moderate | 114 | Moderate | 83 | Satisfactory |
| 2 | Rail Wheel Factory, Yelahanka | 119 | Moderate | 104 | Moderate | 81 | Satisfactory |
| 3 | Urban Ecopark Peenya | 95 | Satisfactory | 96 | Satisfactory | 96 | Satisfactory |
| 4 | Swan Silk Pvt. Ltd ,Peenya | 97 | Satisfactory | 98 | Satisfactory | 86 | Satisfactory |
| 5 | Yeshwanthpura Police Station | 95 | Satisfactory | 101 | Moderate | 75 | Satisfactory |
| 6 | AMCO Batteries, Mysore Road | 86 | Satisfactory | 100 | Satisfactory | 84 | Satisfactory |
| 7 | Central Silk Board, Hosur Road | 113 | Moderate | 116 | Moderate | 90 | Satisfactory |
| 8 | Banaswadi police station | 69 | Satisfactory | 68 | Satisfactory | 93 | Satisfactory |
| 9 | Madavachari house, Kajisonnenahalli | 69 | Satisfactory | 88 | Satisfactory | 79 | Satisfactory |
| 10 | TERI Office, Domlur | 112 | Moderate | 85 | Satisfactory | 97 | Satisfactory |
| 11 | UVCE, K.R Circle | 71 | Satisfactory | 75 | Satisfactory | 83 | Satisfactory |
| 12 | Victoria Hospital, Bangalore | 67 | Satisfactory | 66 | Satisfactory | 60 | Satisfactory |
| 13 | Indira Gandhi Child Health Care Centre | 66 | Satisfactory | 70 | Satisfactory | 57 | Satisfactory |